ದಿನಾಂಕ: 21.01.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸೋಮಶೇಖರ್.ಜಿ.ಎಲ್, ಸಹಾಯಕ ಅಭಿಯಂತರರು, [ಪ್ರಭಾರ] ವಾರ್ಡ್ ನಂ. 99
3. ಶ್ರೀ ನಾಗರಾಜ್. ಕೆ.ಬಿ. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ ಶಿವರಾಮಯ್ಯ, ಎ.ಎಸ್.ಐ. ರಾಜಾಜಿನಗರ
5. ಶ್ರೀ ಜಿ.ಸಿ. ಲೋಕೇಶ್, ಮೌಲ್ಯಮಾಪಕರು, ಕಂದಾಯ ಇಲಾಖೆ,
6. ಶ್ರೀ ಬಸವರಾಜು, ಆಹಾರ ನಿರೀಕ್ಷಕರು,
7. ಶ್ರೀ ಕಾಂತರಾಜು.ಎನ್. ಮುಖ್ಯ ಪೇದೆ, ವಿಜಯನಗರ ಸಂಚಾರಿ ಪೋಲಿಸ್ ಠಾಣೆ
8. ಶ್ರೀ ರಮೇಶ್, ಎಂ. ವಿಲೇಜ್ ಅಕೌಂಟೆಂಟ್, ಉಪತಹಶೀಲ್ದಾರ್, ನಾಡಕಛೇರಿ, ರಾಜಾಜಿನಗರ
9. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
10. ಶ್ರೀ ಶಿವಪ್ಪ, ಮಾರ್ಷಲ್
11. ಶ್ರೀ ಡಿ. ಆನಂದ್. ಸದಸ್ಯರು
9. ಶ್ರೀ ಶ್ರೀನಿವಾಸ್.ಎನ್. ಸದಸ್ಯರು
10. ಶ್ರೀ ಉಮೇಶ್, ಸದಸ್ಯರು,
11. ಶ್ರೀ ಎಸ್. ರಾಜಣ್ಣ, ಸದಸ್ಯರು
12. ಶ್ರೀ ಎನ್. ಮಂಜುನಾಥ್, ಸದಸ್ಯರು,

ದಿನಾಂಕ: 21.01.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: **ಅಬ್ದುಲ್ ಕಲಾಂ, ಸಭಾಂಗಣದಲ್ಲಿ** ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಹಿಂದಿನ ಸಭೆಯ ನಡವಳಿಯ ಪಟ್ಟಿಯನ್ನು ಸಭೆಗೆ ಮಂಡಿಸಲಾಯಿತು.
2. ಹಿಂದಿನ ಸಭೆಯಲ್ಲಿ ತೆಗೆದುಕೊಂಡ ನಡವಳಿಗಳ ಅನುಷ್ಠಾನದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
3. ಶ್ರೀ ಉಮೇಶ್ ವಾರ್ಡ್ ಕಮಿಟಿ ಸದಸ್ಯರು ಮಾತನಾಡುತ್ತಾ, ಸಿಲ್ಟ್ ಅಂಡ್ ಟ್ರಾಕ್ಟರ್ ಟೆಂಡರ್ ಅವಧಿಯು ಮುಕ್ತಾಯವಾಗಿರುವುದರಿಂದ ಬೇರೆ ವ್ಯವಸ್ಥೆಯನ್ನು ಮಾಡಲು ಸಭೆಯಲ್ಲಿ ಕೋರಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಹಿಂದೆ ಇದ್ದ ಸಹಾಯಕ ಅಭಿಯಂತರರು ಟೆಂಡರ್ ನೀಡಿದ ನಂತರ ಒಂದು ವರ್ಷದಲ್ಲಿ 6 ತಿಂಗಳು ಮಾತ್ರ ಕೆಲಸ ನಿರ್ವಹಿಸಿದ್ದು, ಕರೋನ ರೋಗದಿಂದಂದಾಗಿ ಉಳಿದ 6 ತಿಂಗಳು ಕೆಲಸ ನಿರ್ವಹಿಸಿರುವುದಿಲ್ಲವೆಂದು ಹಿಂದಿನ ವಾರ್ಡ್ ಕಮಿಟಿ ಸಭೆಯಲ್ಲಿ ತಿಳಿಸಿದ್ದಾರೆ. ಆದುದರಿಂದ ಸದರಿ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ ಕಾಮಗಾರಿಯನ್ನು ಮುಂದುವರೆಸುವಂತೆ ನೋಡಲ್ ಅಧಿಕಾರಿಗಳು ತಿಳಿಸಿದರು.
4. ಮಾನ್ಯ ಆಯುಕ್ತರ ಸುತ್ತೋಲೆಯಂತೆ ರಸ್ತೆಯ ನಾಮಫಲಕಗಳಲ್ಲಿ ಇರುವ ಭಾವ ಚಿತ್ರಗಳನ್ನು ತೆರವುಗೊಳಿಸಲು ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದರು ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಇದರ ಬಗ್ಗೆ ಸಹಾಯಕ ಅಭಿಯಂತರರು ಮಾತನಾಡುತ್ತಾ, ಮುಂದಿನ ವಾರ್ಡ್ ಕಮಿಟಿ ಸಭೆಯೊಳಗೆ ನಾಮಫಲಕವನ್ನು ತೆರವುಗೊಳಿಸಲಾಗುವುದೆಂದು ತಿಳಿಸಿದರು.
5. ವಾರ್ಡಿನಲ್ಲಿ ಎರಡು ಶುದ್ಧ ನೀರಿನ ಘಟಕವನ್ನು ನಿರ್ಮಾಣ ಮಾಡಿದ್ದು, ಸದರಿ ನೀರಿನ ಘಟಕವನ್ನು ಸಾರ್ವಜನಿಕರಿಗೆ ಅನುಕೂಲವಾಗುವಂತೆ ತೆರೆಯಲು ಕ್ರಮ ವಹಿಸಲು ಕಾರ್ಯಪಾಲಕ ಅಭಿಯಂತರರಿಗೆ ತಿಳಿಸಲಾಯಿತು.

ಪು.ತಿ.ನೋ.

Scanned by CamScanner

ಸ್ಥ.

6. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಉಪತಹಶೀಲ್ದಾರ್ ರವರ ಕಛೇರಿಯಿಂದ ಹಾಜರಿದ್ದ ವಿಲೇಜ್ ಅಕೌಂಟೆಂಟ್ ರವರಿಗೆ ಮುಂದಿನ ಸಭೆಯಲ್ಲಿ ಈ ವಾರ್ಡಿಗೆ ಸಂಬಂಧಪಟ್ಟ ತಮ್ಮ ಕಛೇರಿಯಲ್ಲಿ ದಾಖಲಾಗಿರುವ ದೂರುಗಳ ಪಟ್ಟಿ, ವಿದವೆ ವೇತನ, ಸಕಾಲ ವ್ಯಾಪ್ತಿಗೆ ಬರುವ ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಹಾಜರು ಪಡಿಸುವಂತೆ ತಿಳಿಸಿದರು.

7. ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಮಾನ್ಯ ಆಯುಕ್ತರ ಆದೇಶದಂತೆ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ಗುರುತಿಸಿ, ಪಟ್ಟಿ ಮಾಡಿ ನೀಡಲು ಕಾಮಗಾರಿ ಇಲಾಖೆ ಹಾಗೂ ಕಂದಾಯ ಇಲಾಖೆಗೆ ಸೂಚಿಸಿದರು.

8. ಶ್ರೀ ಶಿವರಾಮಯ್ಯ, ಎ.ಎಸ್.ಐ. ಸಂಚಾರಿ ಪೋಲೀಸ್ ಠಾಣೆ ರವರು ಮಾತನಾಡುತ್ತಾ, ತುಂಬಾ ದಿನಗಳಿಂದ ಒಂದೇ ಸ್ಥಳದಲ್ಲಿ ಇರುವ ಹಳೇಯ ವಾಹನಗಳನ್ನು ಜಕ್ಕರಾಯನ ಕೆರೆಯ ಆವರಣಕ್ಕೆ ಸಾಗಿಸಲು ಹಿಂದಿನ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಸದರಿ ಸ್ಥಳವು ಈಗಾಗಲೇ ಭರ್ತಿಯಾಗಿರುವುದಾಗಿ ಸಂಚಾರಿ ಪೋಲಿಸ್ ಆಯುಕ್ತರು ತಿಳಿಸಿರುವುದರಿಂದ ಬೇರೆ ಸ್ಥಳವನ್ನು ನೀಡಬೇಕಾಗಿ ಕೋರಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಪಾಲಿಕೆಯ ಖಾಲಿ ಜಾಗವು ಯಾವುದು ಇಲ್ಲದೆ ಇರುವುದರಿಂದ ಪಿ ಅಂಡ್ ಟಿ ರಸ್ತೆಯಲ್ಲಿ ನಿಲುಗಡೆಗೊಳಿಸಲು ಸಭೆಯಲ್ಲಿ ತಿಳಿಸಿದರು.

9. ಕಂದಾಯ ಇಲಾಖೆ ರವರು ಮಾತನಾಡುತ್ತಾ, ನಮ್ಮ ಕಛೇರಿಯಲಿ ಸಕಾಲದಡಿಯಲ್ಲಿ ಬರುವ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು.

10. ವಾರ್ಡ್ ಕಮಿಟಿ ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳ ಬಗ್ಗೆ ಅವರಿಗೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಪತ್ರವನ್ನು ಬರೆಯಲು ನೋಡಲ್ ಅಧಿಕಾರಿಗಳು ಕಾರ್ಯದರ್ಶಿಗಳಿಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 99

Scanned by CamScanner